◆ **ಇಡೀ ಶಿಕ್ಷಣ ಉರ್ದುದೊಳಗೆ?**

ಹೌದೌದು. ಬಿ.ಎ. ತನಕಾನೂ ಎಲ್ಲಾ ಉರ್ದು ಇತ್ತು; ಹಿಂದಿ ಎಂ.ಎ.ಯೊಳಗ ಒಂದು ಪೇಪರ್ ಉರ್ದು ಇತ್ತು. 1964ರ ತನಕ ನನಗ ಕನ್ನಡ ಮಾತಾಡಲಿಕ್ಕೆ ಸೈತ ಬರ್ತಿದ್ದಿಲ್ಲ. ಒಂದಕ್ಷರ ಓದೋಕೆ ಬರ್ತಿದ್ದಿಲ್ಲ. ತಂದೆಯವರು ಪ್ರೈಮರಿ ಸ್ಕೂಲ್ ಟೀಚರ್ ಇದ್ರು. ಅವರ ಜೊತೆಗೆ ನನ್ನ ಪತ್ರ ವ್ಯವಹಾರ ಎಲ್ಲ ಉರ್ದುದೊಳಗ ನಡೀತಿತ್ತು.

◆ **ಆಗ ಹೈದರಾಬಾದ್ ಕರ್ನಾಟಕದಲ್ಲಿ ಉರ್ದು ಹೇಗೆ ಆವರಿಸಿಕೊಂಡಿತ್ತು?**

ಟೆಕ್ನಿಕಲ್ ಮೆಡಿಸಿನ್ ಕಂಪ್ಲೀಟ್ ಉರ್ದು ಮೀಡಿಯಮ್ ಇತ್ತು, ಉಸ್ಮಾನಿಯಾ ಯೂನಿವರ್ಸಿಟಿಯೊಳಗ. ಮೊನ್ನೆಮೊನ್ನೆ ತನಕ ಚೀಫ್ ಎಂಜಿನಿಯರ್ ಸೆಕ್ರೆಟರೀಸಾಗಿ ರಿಟೈರ್ ಆದರಲ್ಲರಿ, ಉರ್ದು ಕಲಿತು. ಉರ್ದು ಓದಿಕೊಂಡಿದ್ದು ಅಂತ ನಮಗ ಅಭಿಮಾನ ಇತ್ತು; ಒಂದು ತರಹ ಅಥಾರಿಟಿ ಇತ್ತು. ಆದರ ಇತ್ತಿತ್ತಲಾಗ ಅದರದು ಕಾಂಟ್ಯಾಕ್ಟೇ ತಪ್ಪಿಹೋಗಿದೆ. ಈಗ ಬರೆಯೋ ಕಾಲಕ್ಕ ಗಾಬರಿಯಾಗತೈತಿ – ಇದು ಕರೆಕ್ಟೊ ಇಲ್ಲವೊ ಅಂತ. ಯಾಕಂದ್ರ ಉರ್ದು ಸಿಂಟ್ಯಾಕ್ಸ್ ಸ್ವಲ್ಪ ಡಿಫರಂಟ್ ಅದ. ಒಂದು 'ಕ' ಬರೀಬೇಕು ಅಂದರ ಮೂರು ನಮೂನಿ ಬರೀತಾರ.

◆ **ಶಿಕ್ಷಣ ಮಾಧ್ಯಮ ಬಿಟ್ಟು ಉರ್ದುವಿನ ಜತೆ ನಿಮ್ಮ ಸಂಬಂಧ ಹೇಗಿತ್ತು?**

ಬಹಳ ಎಂಜಾಯ್ ಮಾಡ್ತಿದ್ದಿವುರೀ. ಆಗ ನಮ್ಮ ತಲೆಮಾರಿನ ಎಕ್ಸ್‌ಪ್ರೆಶನ್ ಉರ್ದು ಆಗಿತ್ತು. ಇವತ್ತಿಗಾದ್ರೂ ನನ್ನ ವಯಸ್ಸಿನವರ ಜೊತೆಗೆ ಉರ್ದು ಮಾತಾಡ್ತಿಲ್ಲ ಅಂತಂದರ, ನಾ ಮಾತಾಡ್ತೀನಿ ಅಂತ ನನಗೂ ಅನಸಂಗಿಲ್ಲ. ಅವರಿಗೂ ಅನಸಂಗಿಲ್ಲ. ಕ್ಲಾಸ್‌ಮೇಟ್ ಭೇಟಿಯಾದವಿ ಅಂದರ, ಇನ್‌ವೇರಿಯಬಲಿ ಉರ್ದು ಮಾತಾಡ್ತವಿ. ಸ್ನೇಹಿತ ಬಂದರೆ 'ಏ ದೋಸ್ತ್ ಕೈಸಾ ಹೈ, ಕ್ಯಾ ಹೈ' ಹಿಂಗೇ ಮಾತಾಡೋದು, ಇವತ್ತಿಗಾದರೂ. ಅದು ಬಹಳ ಆಪ್ತ ಅನಸ್ತದ. ಕನ್ನಡ ಮಾತಾಡಿದ್ರ ಇನ್ನೊಂದು ಭಾಷೆದಾಗ ಮಾತಾಡ್ತೀವೇನೊ ಅಂತ ಇವತ್ತಿಗಾದರೂ ಒಂಥರಾ ಗಾಬರಿ. 'ಅದು ಬ್ಯಾರೆ ಧರ್ಮದವರದು ಅದ. ನಾವ್ಯಾಕ ಕಲೀಬೇಕು' ಅಂತ ಮನಸಿಗೆ ಎಂದೂ ಬರ್ತಿದ್ದಿಲ್ಲ. ನಮಗ ಎಕ್ಸ್‌ಪ್ರೆಸ್ ಮಾಡಲಿಕ್ಕೆ ಉರ್ದುವೊಳಗ ಎಷ್ಟು ಈಜಿ ಅನಸುತಿತ್ತೊ, ಎಷ್ಟು ರಿಚ್ ಅನಸತಿತ್ತೊ, ಅಷ್ಟು ಕನ್ನಡದೊಳಗೆ ಅನಿಸಿರಲಿಲ್ಲ. ನಾನು ಹಿಂದಕ ಉರ್ದುದೊಳಗಾ ಬರೀತಿದ್ದೆ. ಆಮೇಲೆ ಹಿಂದಿಗೆ ಬಂದೆ. ಹಿಂದೀಲಿ ಜಗದೀಶಗುಪ್ತ ಅಂತಿದ್ದರು. ನಮ್ಮಲ್ಲಿ ಅಡಿಗರ ಹಂಗ ದೊಡ್ಡ ಕವಿ. ಹೊಸ ಪೊಯೆಟ್ರಿಯಲ್ಲಿ ದೊಡ್ಡಸಾಧನೆ ಮಾಡಿದೋರು. ಇವರು ದಕ್ಷಿಣ ಭಾರತದ ರೈಟರ್ಸ್ ಒಳಗೆ ಇವತ್ತಿನ ತನಕಾನೂ ನಾನೊಬ್ಬನೇ ಹಿಂದಿ ನಾನ್‌ಸ್ಪೀಕಿಂಗ್ ಇದ್ದೀನಿ ಅಂತಿದ್ದರು.

◆ **ಉರ್ದು ಅಭಿವ್ಯಕ್ತಿಗೆ ಸಮರ್ಥವಾಗಿತ್ತು ಅನ್ನೋದರ ಜತೆಗೆ, ಅದು ಪ್ರಭುತ್ವದ ಭಾಷೆಯೂ ಆಗಿತ್ತು. ಹೇರಿಕೆಯಿತ್ತಾ?**

ನನಗೇನು ಹೇರಿಕೆ ಅನಸಂಗಿರಲಿಲ್ಲ. ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಇತ್ತು. ಓದಿದ್ದಿವಿ. ಬಹಳ ಈಜಿ ಅನಸ್ತು. ಮುಸಲ್ಮಾನರು ನಮ್ಮ ಕ್ಲೋಜ್‌ಫ್ರೆಂಡ್ಸ್ ಎಲ್ಲರೂ ಹಬ್ಬ–ಹುಣ್ಣಿವಿ–ಈದ್ ಇದ್ದಾಗ ಮನೆಗೆ ಕರೆಯೋರು. ಅವರ ಮನ್ಯಾಗ ಊಟ ಮಾಡಿಸೋರು. ನಮ್ಮ ತಲೆಮೇಲೆ ಕೈಯಾಡಿಸಿ 'ಕೈಸಾ ಹೈ? ಅಚ್ಛಾ ಪಡನಾ, ಅಚ್ಛಾ ಲಿಖನಾ ದೇಖೊ' ಅಂತಂದು ಹೇಳಿ, ನಮ್ಮ ತಾಯಿ ಮಾಡಿದಂಗ ಪ್ರೀತಿ ಮಾಡತಿದ್ದರು. ಈಗ ಆ ಹೆಣ್ಣುಮಕ್ಕಳನ್ನ ನೆನೆಸಿಕೊಂಡರ ನಮ್ಮ ತಾಯೀನ್ನ ನೆನೆಸಿಕೊಂಡಂಗ ಆಗ್ತದ. ಅವರ ತಂದೆಗೆ ನೆನೆಸಿಕೊಂಡರೂ ಹಿಂಗೇ ಆಗ್ತದ. ನಮ್ಮ ಕಲೀಗ್ಸ್ ಟೀಚರ್ಸ್ ಮುಸಲ್ಮಾನರು